# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ಎಸ್.ಸಿ. ಸಂಖ್ಯೆಃ 1/2020

ಅ.ಸಾ. 02

ದೊ.ಸಾ. 04

| | |
|---|---|
| ಸಾಕ್ಷಿಯ ಹೆಸರು | ಃ ರುದ್ರಪ್ಪ ಮುರಾರಿ |
| ತಂದೆ ಹೆಸರು | ಃ ಶಿವಾಜಿ |
| ವಯಸ್ಸು | ಃ 42 ವರ್ಷ |
| ಉದ್ಯೋಗ | ಃ ಗುಮಾಸ್ತ, ಹಂಗರಕಿ ಗ್ರಾಮಪಂಚಾಯತಿ |
| ವಾಸಸ್ಥಳ | ಃ ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | ಃ 30/08/2021 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ.1 ಹಂಗರಕಿ ಪಂಚಾಯತಿಯಲ್ಲಿ ಪಿ.ಡಿ.ಓ., ಆಗಿ 2016 ರಿಂದ 2018 ರವರೆಗೆ ಕಾರ್ಯನಿರ್ವಹಿಸಿದ್ದಾರೆ. ಚಾಸಾ.5 ರಿಂದ 8 ಆ ಸಮಯದಲ್ಲಿ ಹಂಗರಕಿ ಪಂಚಾಯತಿಯ ಸಿಬ್ಬಂದಿಗಳಾಗಿದ್ದರು. ಚಾಸಾ.9 ಆ ಸಮಯದಲ್ಲಿ ಪಂಚಾಯತಿಯ ಅಧ್ಯಕ್ಷರಾಗಿದ್ದರು. ಚಾಸಾ.10 ರಿಂದ 12 ಪಂಚಾಯತಿಯ ಸದಸ್ಯರಾಗಿದ್ದರು. ಚಾಸಾ.13 ಹಂಗರಕಿಯ ನಿವಾಸಿಗಳು.

2. ದಿಃ 15/02/2018 ರಂದು ಗ್ರಾಮ ಪಂಚಾಯತಿ ಕಚೇರಿಯ ಅಡಿಟ್ ಇತ್ತು. ಅಡಿಟ್‌ಗೆ ವ್ಯವಸ್ಥೆ ಮಾಡಲು ನಾನು ಕಚೇರಿಗೆ ಬೇಗ ಹೋಗಿದ್ದೆ. ಕಚೇರಿಯಲ್ಲಿದ್ದ ಫೈಲ್ ಗಳನ್ನು ಹೊಂದಾಣಿಕೆ ಮಾಡಿ ಇಟ್ಟೆವು. ನಂತರ ನಾನು ಹಾಗೂ ಸಿಬ್ಬಂದಿಗಳು ಚಹಾ ಕುಡಿಯಲು ಹೋದೆವು. ನಾವು ಚಹಾ ಕುಡಿದು ವಾಪಸ ಕಚೇರಿಗೆ ಬರುವಾಗ ನಮ್ಮ ಕಚೇರಿಯ ಫೈಲ್ ಗಳಿಗೆ ಮತ್ತು ದಾಖಲಾತಿಗಳಿಗೆ ಬೆಂಕಿ ಹಚ್ಚಿದ್ದರು. ಸದರಿ ದಾಖಲಾತಿಗಳಿಗೆ ಮತ್ತು ಫೈಲ್ ಗಳಿಗೆ ಪಂಚಾಯತಿ ಕಚೇರಿಯ ಹೊರಗೆ ಬೆಂಕಿ ಹಚ್ಚಿದ್ದರು. ಆ ಸಮಯದಲ್ಲಿ ಪಂಚಾಯತಿ ಕಚೇರಿಯ ಎದುರು ಜನ ಸೇರಿದ್ದರು. ಆರೋಪಿ ಪಂಚಾಯತಿಯ ವರಾಂಡ್ ದಲ್ಲಿದ್ದ. ಅಲ್ಲಿದ್ದ ಸಾರ್ವಜನಿಕರು ಆರೋಪಿ ದಾಖಲಾತಿಗಳಿಗೆ ಬೆಂಕಿ ಹಚ್ಚಿದ್ದಾನೆ ಎಂದು ಹೇಳಿದರು. ಬೆಳಿಗ್ಗೆ 10.45 ಗಂಟೆಗೆ ಸದರಿ ದಾಖಲೆಗಳು ಸುಟ್ಟಿದ್ದವು.

3. ದಾಖಲೆಗಳು ಸುಟ್ಟ ವಿಷಯವನ್ನು ನಾನು ಪ್ರಾಸಾ.1 ಕ್ಕೆ ಹಾಗೂ ತಾಲೂಕ ಕಚೇರಿಗೆ ತಿಳಿಸಿದೆ. ಪ್ರಾಸಾ.1 ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದಾರೆ.

4. ಕಚೇರಿಯಲ್ಲಿದ್ದ ಎನ್.ಆರ್.ಇ.ಜಿ.ಫೈಲ್‌ಗಳು, 14 ನೇ ಹಣಕಾಸು ವರ್ಷದ ಫೈಲ್ ಗಳು, ಸಾದಿಲ್ವಾರ್ ಬಿಲ್‌ಗಳು, ಎಸ್.ಬಿ.ಎಂ. ಶೌಚಾಲಯ ಫೈಲ್‌ಗಳು, ಕಚೇರಿಯ ನಡಾವಳಿಗಳು ಮತ್ತು ಬಸವ ವಸತಿ ಯೋಜನೆ ಫೈಲ್ ಗಳು ಮತ್ತು ಇತರ ಫೈಲ್ ಗಳಲ್ಲಿ ಕೆಲವು ಸಂಪೂರ್ಣ ಸುಟ್ಟಿದ್ದು, ಇನ್ನೂ ಕೆಲವು ಭಾಗಶಃ ಸುಟ್ಟಿದ್ದವು. ಆ ದಿನ ಭಾಗಶಃ ಸುಟ್ಟಂತಹ ದಾಖಲೆಗಳನ್ನು ಸಂಜೆ ನಾವು ಹೊಂದಿಸಿ ಇಟ್ಟಿದ್ದೇವು. ಮರುದಿನ ಮದ್ಯಾಹ್ನ 12.00 ಗಂಟೆಗೆ ಪೊಲೀಸರು ಕಚೇರಿಗೆ ಬಂದು ಪಂಚಾಯದಸ್ತ ಮಾಡಿದರು. ಪೊಲೀಸರಿಗೆ ಗುನ್ನಾ ಜಾಗವನ್ನು ನಾನೇ ತೋರಿಸಿದ್ದೇನೆ. ಪೊಲೀಸರು ಅರ್ಧಮರ್ಧ ಸುಟ್ಟ ದಾಖಲೆಗಳನ್ನು ಅಮಾನತ್ತುಪಡಿಸಿ ತೆಗೆದುಕೊಂಡು ಹೋಗಿದ್ದಾರೆ.

5. ಘಟನೆಯಾದ 3-4 ದಿನಗಳ ನಂತರ ಪಂಚಾಯತಿಯ ಅಧ್ಯಕ್ಷರು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಕೊಟ್ಟಿದ್ದು ಕೇಳಿ ಗೊತ್ತಾಯಿತು. ಆರೋಪಿಯ ಮೇಲೆ ದೂರು ಕೊಟ್ಟಿದ್ದಾರೆ ಎಂದು ಗೊತ್ತಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ಹೇಳಿದ್ದು, ಕಾರಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ</u>**

6. ಪೊಲೀಸರ ಮುಂದೆ ಹೇಳಿಕೆ ಕೊಡುವಾಗ "ಹಂಗರಕಿಯ ಉಮೇಶ ತಂದೆ ಶಿವಪ್ಪ ರಾಮಣ್ಣವರ ಈತನು ಏಕಾಏಕಿ ಯಾವುದೋ ದುರುದ್ದೇಶದಿಂದ ಕಂಪೌಂಡ್ ಹಾರಿ, ಆಫೀಸಿನಲ್ಲಿ ಅತೀಕ್ರಮಣ ಪ್ರವೇಶ ಮಾಡಿ ಒಳಗೆ ಆರ್ಥಿಕ ವರ್ಷದ ಕೊನೆ ಹೊಂದಾಣಿಕೆಗಾಗಿ ಹಾಗೂ ಎನ್

ಎಲ್ ಎಂ ಟೀಮ್ ವಿಸಿಟ್ ಗೆ ಸಂಬಂಧಿಸಿದಂತಹ ಎಲ್ಲಾ ಫೈಲ್ ಗಳು ಹಾಗೂ ಗ್ರಾಮ ಪಂಚಾಯತಿಯ ಮಹತ್ವಪೂರ್ವಕ ಫೈಲ್ ಮತ್ತು ರಜಿಸ್ಟರ್ ಗಳನ್ನು ಹೊರಗೆ ತೆಗೆದುಕೊಂಡು ಬಂದು, ವರಾಂಡ್‌ದಲ್ಲಿಟ್ಟು ನಾವು ಚೀರುವಷ್ಟರಲ್ಲಿ ಎಲ್ಲಾ ಫೈಲ್‌ಗಳ ಗುಂಪಿಗೆ ಬೆಂಕಿ ಹಚ್ಚಿ ಓಡಿ ಹೋದ" ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ.ಎನ್ ಹೆಚ್ ಟಿ ವಕೀಲರು ಸಮಯ ಕೋರುತ್ತಾರೆ. ಕಾರಣ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

30/08/2021

(**ಉಮೇಶ ಎಂ ಅಡಿಗ**)

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.

**ಇಂದು ದಿಃ 07/10/2021 ರಂದು ಸಾಕ್ಷಿ ರುದ್ರಪ್ಪ ಮುರಾರಿರವರನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ</u>**

7. ದಿಃ 15/02/2018 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ಕಚೇರಿಗೆ ಬಂದಿದ್ದೆ. ಚಹಾ ಕುಡಿಯಲು ಬೆಳಿಗ್ಗೆ 9.00 ರಿಂದ 9.30 ಗಂಟೆಯ ಒಳಗೆ ಹೋಗಬಹುದು. ನಮ್ಮ ಕಚೇರಿಯಿಂದ ಸುಮಾರು 100 ಮೀಟರ್ ದೂರದಲ್ಲಿ ಚಹಾದ ಅಂಗಡಿ ಇದೆ. ಚಹಾ ಕುಡಿಯಲು ಹೋದಾಗ ನಮ್ಮ ಕಚೇರಿಗೆ ಬೀಗ ಹಾಕಿ ಹೋಗಿರಲಿಲ್ಲ. ಸಾಕ್ಷಿ ಮುಂದದುವರೆದು ಕಚೇರಿಯಲ್ಲ ಸಿಪಾಯಿ ಇದ್ದು ಆತನಿಗೆ ಹೇಳಿ ಹೋಗಿದ್ದೆ ಎಂದು ಹೇಳುತ್ತಾರೆ. ನಮ್ಮ ಮೇಲಾಧಿಕಾರಿಗಳಿಗೆ ಕಚೇರಿಯ ಕಡತಗಳಿಗೆ ಆಕಸ್ಮಿಕವಾಗಿ ಬೆಂಕಿ ಹತ್ತಿದ ವಿಷಯವನ್ನು ನಾನೇ ಹೇಳಿರುತ್ತೇನೆ.

8. ಘಟನೆ ನಡೆದ ದಿನ ಪಿ.ಡಿ.ಓ., ನಮ್ಮ ಕಚೇರಿಗೆ ಬಂದಿರಲಿಲ್ಲ. ಸಾಕ್ಷಿ ಮುಂದುವರೆದು ಅವರು ರಜೆಯಲ್ಲಿದ್ದರು ಎಂದು ಹೇಳುತ್ತಾರೆ. ಆರೋಪಿ ಕಚೇರಿಯ ದಾಖಲಾತಿಗಳಿಗೆ ಬೆಂಕಿ ಹಚ್ಚಿದ್ದಾನೆಂದು ಸ್ಥಳದಲ್ಲಿದ್ದ ನನಗೆ ಹೆಸರು ಗೊತ್ತಿಲ್ಲದ ಸಾರ್ವಜನಿಕರು ಹೇಳಿದ್ದಾರೆ. ಪೊಲೀಸರಿಗೆ ನಾನು ಹೇಳಿಕೆ ಕೊಡುವಾಗ ಆರೋಪಿ ದಾಖಲೆಗಳಿಗೆ ಬೆಂಕಿ ಹಚ್ಚಿದ್ದಾನೆಂದು ಸ್ಥಳದಲ್ಲಿದ್ದ ಸಾರ್ವಜನಿಕರು ನನಗೆ ಮಾಹಿತಿ ಕೊಟ್ಟಿದ್ದಾರೆಂದು ನಾನು ಹೇಳಿಲ್ಲ. ನಾನು ಚಹಾ ಕುಡಿದು ಮರಳಿ ಬಂದಾಗ ಆರೋಪಿ ವರಾಂಡ್‌ದಲ್ಲಿದ್ದು, ನಾನು ಆತನನ್ನು ಹಿಡಿದುಕೊಳ್ಳಲು ಪ್ರಯತ್ನ ಮಾಡಲಿಲ್ಲ. ನಾನು ಚಹಾ ಕುಡಿಯಲು ಹೋದಾಗ ಕಚೇರಿಯ ಸಿಪಾಯಿ ಕಚೇರಿಯದಲ್ಲಿದ್ದ ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

9. ಎನ್.ಎಲ್.ಎಂ., ಟೀಂ ನವರು ಆ ದಿನ ಬರುವವರಿದ್ದು, ಘಟನೆಯಾದ ವಿಷಯವನ್ನು ಅವರಿಗೆ ತಿಳಿಸಿದ ಕಾರಣ ಅವರು ಆ ದಿನ ಭೇಟಿ ಕೊಡಲಿಲ್ಲ. ನಾನು ಘಟನೆಯ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿದ್ದು, ಸಾಕ್ಷಿ ಮುಂದುವರೆದು ನಮ್ಮ ಮೇಲಾಧಿಕಾರಿಗಳು ಅವರಿಗೆ ತಿಳಿಸಿದ್ದಾರೆ ಎಂದು ಹೇಳುತ್ತಾರೆ. ಘಟನೆಯ ವಿಷಯವನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಡುವಾಗ ಹೇಳಿಲ್ಲ. ಕಡತಗಳಿಗೆ ಏಕೆ ಬೆಂಕಿ ಹಚ್ಚಿರುವೆ ಎಂದು ನಾನು ಆರೋಪಿಯನ್ನು ಆನಂತರವೂ ಕೇಳಲಿಲ್ಲ. ಮಹಜರ್ ಮಾಡುವಾಗ ಕಡತಗಳಿಗೆ ಆಕಸ್ಮಿಕವಾಗಿ ಬೆಂಕಿ ಹತ್ತಿದೆ ಎಂದು ಅದರಲ್ಲಿ ಬರೆಯಲು ನಾನು ಹೇಳಿಲ್ಲ. ಸಾಕ್ಷಿ ಮುಂದುವರೆದು ಪೊಲೀಸರಿಗೆ ಹೇಳಿಕೆ ಕೊಡುವಾಗ ನಾನು ಆ ರೀತಿ ಹೇಳಿದ್ದೆ ಎಂದು ಹೇಳುತ್ತಾರೆ.

10. ಘಟನೆಯ ಬಗ್ಗೆ ಪಿ.ಡಿ.ಓ., ಅದೇ ದಿನ ರಾತ್ರಿ ನನ್ನನ್ನು ಕೇಳಿದ್ದಾರೆ. ಸದರಿ ವಿಷಯವನ್ನು ನಾನು ಪೊಲೀಸರಿಗೆ ಹೇಳಿಕೆಗಳನ್ನು ಕೊಡುವಾಗ ಹೇಳಿಲ್ಲ. ನಾನು ಮತ್ತು ಕಚೇರಿಯ ಸಿಬ್ಬಂದಿಗಳು ಸದರಿ ದಾಖಲೆಗಳಿಗೆ ಬೆಂಕಿ ಹಚ್ಚಿ ಸುಟ್ಟಿದ್ದೇವೆ ಅನ್ನುವುದು ಸರಿಯಲ್ಲ. ನಮ್ಮ ಕಚೇರಿಯಲ್ಲಿ ಕಡತಗಳನ್ನು ಇಡಲು ಅಲ್ಮೇರಾಗಳು ಇವೆ. ವರಾಂಡ್‌ದಲ್ಲಿರುವ ಅಲ್ಮೇರಾಗಳಿಗೆ ಬೀಗ ಹಾಕುವ ವ್ಯವಸ್ಥೆ ಇಲ್ಲ. ವರಾಂಡ್‌ದಲ್ಲಿ ಅಲ್ಮೇರಾಗಳನ್ನು ಇಟ್ಟಿಲ್ಲ. ನಾನು, ನಮ್ಮ ಕಚೇರಿಯ ಸಿಬ್ಬಂದಿಗಳು ಹಾಗೂ ಪಿಡಿಓ ಸರಿಯಾಗಿ ಲೆಕ್ಕಪತ್ರಗಳನ್ನು ಇಡದೇ ಇದ್ದು, ಎಲ್ ಎಂ ಎನ್ ತಂಡದವರ ತನಿಖೆ ಮಾಡಿದಾಗ ಅವುಗಳು ಕಂಡುಬರುವುದೆಂದು ನಾವೇ ಕಡತಗಳಿಗೆ ಬೆಂಕಿ ಹಚ್ಚಿದ್ದೇವೆ ಅನ್ನುವುದು ಸರಿಯಲ್ಲ.

ನ್ಯಾಯಾಲಯದ ಪ್ರಶ್ನೆಃ ಘಟನೆಯ ದಿನ ಸಂಜೆ ಪೋಲಿಸ್ ಠಾಣೆಗೆ ಹೋಗಿ ದೂರು ಕೊಡಲು ನಿಮಗೇನಾದರೂ ತೊಂದರೆ ಇತ್ತಾ?

ಉತ್ತರಃ ಅದೇ ದಿನ ಸಂಜೆ 5.30 ಗಂಟೆಗೆ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ . ಪೊಲೀಸರು ನನ್ನ ದೂರನ್ನು ಸ್ವೀಕರಿಸಲಿಲ್ಲ. ಪಿಡಿಓ ದೂರು ಕೊಡುವವರೆಗೂ ನಿಮ್ಮ ದಾರು ನಡೆಯುವುದಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

11. ಅದೇ ದಿನ ಸಂಜೆ 5.30 ಗಂಟೆಗೆ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಪೊಲೀಸರು ನನ್ನ ದೂರನ್ನು ಸ್ವೀಕರಿಸಲಿಲ್ಲ. ಪಿಡಿಓ ದೂರು ಕೊಡುವವರೆಗೂ ನಿಮ್ಮ ದಾರು ನಡೆಯುವುದಿಲ್ಲ ಎಂದು ಪೊಲೀಸರು ಹೇಳಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಪಿಡಿಓ ರಜೆಯಲ್ಲಿದ್ದಾಗ ಅವರು ಪ್ರಭಾರವನ್ನು ಯಾರಿಗೂ ಕೊಟ್ಟಿರಲಿಲ್ಲ. ಘಟನೆಯಾಗಿ ಒಂದು ವಾರದ ನಂತರ ಪಂಚಾಯಿತಿ ಅಧ್ಯಕ್ಷರೇ ದೂರು ಕೊಟ್ಟ ವಿಷಯವನ್ನು ಅಧ್ಯಕ್ಷರೇ ನನಗೆ ಹೇಳಿದ್ದಾರೆ. ಪೊಲೀಸರಿಗೆ ಹೇಳಿಕೆ ಕೊಡುವಾಗ ಘಟನೆಯಾಗಿ ಒಂದು ವಾರದ ನಂತರ ಪಂಚಾಯಿತಿ ಅಧ್ಯಕ್ಷರೇ ದೂರು ಕೊಟ್ಟ ವಿಷಯವನ್ನು ಅಧ್ಯಕ್ಷರೇ ನನಗೆ ಹೇಳಿದ್ದಾರೆ ನಾನು ಪೊಲೀಸರಿಗೆ ಹೇಳಿಲ್ಲ.

12. ಘಟನೆಯ ದಿನ ಆರೋಪಿ ಕಚೇರಿಯ ವರಾಂಡ್ ದಲ್ಲಿದ್ದು, ಅಲ್ಲಿಂದ ಓಡಿ ಹೋದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ. ಆರೋಪಿ ಯಾವುದೇ ತಪ್ಪು

ಮಾಡದಿದ್ದರೂ ಸಹ ನಾನು ಪಿಡಿಓರವರ ಮಾತು ಕೇಳಿ ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

07/10/2021

(**ಉಮೇಶ ಎಂ ಅಡಿಗ**)
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.